## ಹಂತ : 5(ಎ) 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಮೌಲ್ಯಾಂಕನ – 2024–25 ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ. | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಪ್ರಜಾನಿಷ್ಠೆ | ** | ** | 1(3) | ** | ** | ** | ** | ** | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಬೆಡಗಿನ ತಾಣ ಜಯಪುರ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 3 | ರಾಮರಾಜ್ಯ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 5 | ಜನಪದ ಕಲೆಗಳ ವೈಭವ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 6 | ಅಧಿಕಾರ | ** | ** | ** | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 1(3) | ** | ** | 05 | 02 |
| 7 | ನಾ ಕಂಡಂತೆ ಬಿ.ಜಿ.ಎಲ್. ಸ್ವಾಮಿ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 8 | ಹರಲೀಲೆ | ** | ** | ** | ** | ** | 1(1) | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| | **ಗದ್ಯ ಒಟ್ಟು** | * | **3(1)** | **1(3)** | ** | ** | **1(1)** | **4(2)** | ** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಪಾರಿವಾಳ | ** | ** | | ** | ** | 1(1) | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 2 | ಹೊಸಹಾಡು | ** | 1(1) | ** | ** | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 3 | ಚಕ್ರಗ್ರಹಣ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಬಲಿಯನಿತ್ತೊಡೆ ಮುನಿವೆಂ | ** | | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 5 | ಹೇಮಂತ | ** | ** | ** | 1(4) | ** | ** | ** | ** | ** | ** | ** | ** | ** | ** | ** | ** | ** | ** | 1(4) | ** | 04 | 01 |
| 6 | ತತ್ತ್ವಪದಗಳು | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 7 | ನಿನ್ನ ಮುತ್ತಿ ಸತ್ತಿಗೆಯನ್ನಿತ್ತು ಸಲಹು | ** | ** | 1(3) | ** | ** | ** | 1(2) | ** | ** | ** | ** | ** | ** | ** | ** | ** | 1(2) | 1(3) | ** | ** | 05 | 02 |
| 8 | ಕನ್ನಡ ನಾಡು ನುಡಿ | ** | ** | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | 1(4) | ** | 04 | 01 |
| | **ಪದ್ಯ ಒಟ್ಟು** | * | **1(1)** | **1(3)** | **1(4)** | ** | 1(1) | **2(2)** | ** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ಪುಟ್ಟಹಕ್ಕಿ | ** | 1(1) | ** | ** | ** | ** | | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 2 | ಚೆನ್ನಭೈರಾದೇವಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 4 | ನನ್ನಾಸೆ | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| 5 | ಉರಿ ಬದುಕು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 6 | ಗುಣಸಾಗರಿ ಪಂಢರೀಬಾಯಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | * | **1(1)** | ** | ** | ** | ** | **4(2)** | ** | ** | ** | ** | ** | ** | ** | ** | **1(1)** | **4(2)** | ** | ** | ** | **09** | **05** |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

*****

| ಕ್ರ. ಸಂ | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ. | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | ** | ** | ** | 1(3) | ** | | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | **06(1))** | ** | ** | ** | **4(1)** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | **06(1)** | ** | ** | ** | **4(1)** | ** | ** | **3(3)** | ** | ** | 1(3) | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **06(1)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1 )** | **10(2)** | **11(3)** | **5(4)** | **2(5)** | **100** | **45** |
| | | **21 – 14** | | | | **36 – 19** | | | | | **39 – 11** | | | | **4 – 1** | **100 – 45** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಮೌಲ್ಯಾಂಕನ – 2024–25

## ವಿಷಯ : ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಒಟ್ಟು ಪ್ರಶ್ನೆಗಳ ಸಂಖ್ಯೆ : 45.** **ವಿಷಯ ಸಂಕೇತ : 01K**

**ಸಮಯ : 3 – 15 ಗಂಟೆಗಳು** **ಗರಿಷ್ಠ ಅಂಕಗಳು : 100**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. 'ಹುಲಿದೊಗಲು' ಪದದಲ್ಲಿ ಆಗಿರುವ ಸಂಧಿಯಿದು;
   ಎ) ಲೋಪ ಬಿ) ಆಗಮ
   ಸಿ) ಆದೇಶ ಡಿ) ಜಶ್ತ್ವ
2. ಇವುಗಳಲ್ಲಿ ಅಂಶಿ ಸಮಾಸಕ್ಕೆ ಉದಾಹರಣೆಯಾದ ಪದವಿದು;
   ಎ) ಕೆಂದಾವರೆ ಬಿ) ಚಕ್ರಪಾಣಿ
   ಸಿ) ಅಂಗೈ ಡಿ) ಕೈಮುಗಿ
3. 'ಅರಸನತ್ತಣಿಂ' ಪದದಲ್ಲಿರುವ ವಿಭಕ್ತಿಯ ಹೆಸರು;
   ಎ) ತೃತೀಯಾ ಬಿ) ಚತುರ್ಥೀ
   ಸಿ) ಸಪ್ತಮೀ ಡಿ) ಪಂಚಮೀ
4. 'ಪ್ರತ್ಯುತ್ತರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;
   ಎ) ಯಣ್ ಬಿ) ಗುಣ
   ಸಿ) ಯ ಕಾರಾಗಮ ಡಿ) ಶ್ಚುತ್ವ
5. ಜನರು ಅಂಗಡಿಗೆ ಹೋಗುತ್ತಾರೆ – ವಾಕ್ಯವು ಈ ಕಾಲರೂಪಕ್ಕೆ ಉದಾಹರಣೆಯಾಗಿದೆ;
   ಎ) ಭೂತಕಾಲ ಬಿ) ಭವಿಷ್ಯತ್ಕಾಲ
   ಸಿ) ವರ್ತಮಾನಕಾಲ ಡಿ) ಸರ್ವಕಾಲ
6. 'ಜಯವಾಗಲಿ' ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;
   ಎ) ವಿಧ್ಯರ್ಥಕ ಬಿ) ಸಂಭಾವನಾರ್ಥಕ
   ಸಿ) ನಿಷೇಧಾರ್ಥಕ ಡಿ) ಪ್ರಶ್ನಾರ್ಥಕ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4*1=4**

7. ಧಾರವಾಡ : ಅಂಕಿತನಾಮ : : ವಿಜ್ಞಾನಿ : ____
8. ಮಲಗು : ಅಕರ್ಮಕ ಧಾತು : : ಓದು : _____
9. ರಾಯ : ರಾಜ : : ಸಿರಿ : ____________
10. ಪತ್ರ : ಎಲೆ : : ಚಕ್ಕಡಿ : ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1=7**

11. ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ?
12. ರಾಧಾಕೃಷ್ಣನ್ ಅವರ ಜನ್ಮದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತದೆ?
13. ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ?
14. ನಂಬಿಯಣ್ಣನ ಪೂರ್ವಜನ್ಮದ ಹೆಸರೇನು?
15. ಮುದ್ದು ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?
16. ಕಡಿದೊಗೆಯಬೇಕಾದ ಪಾಶಗಳು ಯಾವುವು?
17. ಪುಟ್ಟಹಕ್ಕಿಗೆ ಭೂಮಿ– ಆಕಾಶದಲ್ಲಿ ಯಾರ ಭಯವಿದೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20**

18. ಜಯಪುರದಲ್ಲಿರುವ ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.
19. ರಾಧಾಕೃಷ್ಣನ್ ಅವರು ಶಿಕ್ಷಣದ ಮಹತ್ತ್ವವನ್ನು ಹೇಗೆ ವಿವರಿಸಿದ್ದಾರೆ?
20. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ? ವಿವರಿಸಿ.
21. ಶಾಸನಗಳನ್ನು ಹಾಕಿಸುವುದರ ಬಗೆಗೆ ಬಸವಣ್ಣನವರ ಅಭಿಪ್ರಾಯವೇನು?
22. ಪಾರಿವಾಳಗಳ ಆನಂದಕ್ಕೆ ಕಾರಣವೇನು?
23. ಹರಿಶ್ಚಂದ್ರನು ಮುತ್ತಿನ ಸತ್ತಿಗೆಯನ್ನು ಏಕೆ ಕೊಡಲು ಸಾಧ್ಯವಿಲ್ಲ ಎಂದು ಹೇಳಿದನು?
24. ಶಬಲೆಯು ಹೇಳಿದಂತೆ ಪೋರ್ಚುಗೀಸರು ಯಾವ ಕಾರಣಗಳಿಗಾಗಿ ಯುದ್ಧಕ್ಕೆ ಸಿದ್ಧರಾಗಿದ್ದರು?
25. ಕವಿ ರತ್ನಾಕರವರ್ಣಿಯು ತನ್ನ ಕೃತಿಯನ್ನು ಬೇರೆಬೇರೆ ಭಾಷಿಕರು ಹೇಗೆ ಹೊಗಳಬೇಕೆಂದು ಬಯಸುವನು?
26. ದುರ್ಗಪ್ಪನು ಶಂಕರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿಮಾತುಗಳಾವುವು?
27. ಪಂಢರಿಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

28. ಸಾ. ಶಿ. ಮರುಳಯ್ಯ
29. ರಾಘವಾಂಕ

**VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3**

**30. ಅತಿಕುಟಿಲಮನಂ ಧನಲು**

**ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ ।**

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1*3=3**

31. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

32. ಬೆಳ್ಳಗಿರುವುದೆಲ್ಲ ಹಾಲಲ್ಲ.

ಅಥವಾ

ದೂರದ ಬೆಟ್ಟ ನುಣ್ಣಗೆ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

33. "ರಾಜ್ಯಭಾರ ಅಂದರ ಕಾಯಕ ಅದಕ್ಕ ವಂಶಾ ಇದ್ದರ ಸಾಲದು."
34. "ಎಂತಹ ಅದ್ಭುತ ರಚನಾ ವೈಖರಿ ಕಾಣುತ್ತೆ ಗೊತ್ತೆ!"
35. "ಪುಣ್ಯಂ ಪಣ್ಣಾದಂತೆ"
36. "ನಡೆನುಡಿಗಳೆಡೆಯಲ್ಲಿ ಪರತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"
37. "ತೃಣವ ಮುರಿಯುವುದಕೆ ಕೊಡಲಿಯು ಬೇಕೆ"
38. "ಬಲಿಯನಿತ್ತೊಡೆ ಮುನಿವೆಂ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4**

39. ಹೇಮಂತ ______________________

______________________

______________________

______________________ ಮರುತನಿಲ್ಲ

ಅಥವಾ

ಹೇಮಂತನಾಳಿಕೆಯ ____________________

______________________________

______________________________

______________________________ ಧರ್ಮ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1*4=4**

40. ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ ।
ಲಲಿತವಹ ಕನ್ನಡದ ನುಡಿಯಲಿ
ಘಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8**

41. ರಾಜ್ಯಾಡಳಿತದ ವಿಷಯದಲ್ಲಿ ರಾಮನ ಉಪದೇಶವನ್ನು ಸಂಗ್ರಹವಾಗಿ ಬರೆಯಿರಿ.

ಅಥವಾ

ರಾಜನಲ್ಲಿ ತಲೆದೋರಬಹುದಾದ ಹದಿನಾಲ್ಕು ದೋಷಗಳ ಬಗ್ಗೆ ವಿವರಿಸಿ.

42. 'ಗುರು ಕರುಣೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

'ಬಿದಿರು' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4[2+2]**

43. ಕೆಲವು ದಿನಗಳ ತರುವಾಯ ರಂಗಣ್ಣ ಸ್ಕೂಲುಗಳ ಭೇಟಿಗೆಂದು ಹೊರಟ. ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೇ? ಇನ್ನೂ ಇತರರು ಯಾರು ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ? ನೋಡೋಣ ಎಂದು ಆಲೋಚಿಸುತ್ತ ತಿಪ್ಪೇನಹಳ್ಳಿಗೆ ಸುಮಾರು ಒಂಬತ್ತು ಗಂಟೆ ಹೊತ್ತಿಗೆ ಹೋದ. ರಂಗಣ್ಣ ಬೈಸ್ಕಲ್ಲಿಂದ ಇಳಿದು, ಅದನ್ನು ಗೋಡೆಗೆ ಒರಗಿಸಿದನು. ಮೇಷ್ಟ್ರು ವೆಂಕಣ್ಣ ಭಯದಿಂದ ನಡುಗುತ್ತ ಹೊರಕ್ಕೆ ಬಂದು ನಮಸ್ಕಾರ ಮಾಡಿದನು. ಪಾಠಶಾಲೆಯ ಗೋಡೆಗೆ ನೋಟೀಸ್ ಬೋರ್ಡ್ ಒಂದನ್ನು ತಗಲುಹಾಕಿತ್ತು. ನೋಟೀಸು ಬೋರ್ಡಿನ ಮೇಲೆ (1) ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು. (2) ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು. (3) ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ. (4) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಯಾರೂ ಕುಳಿತು ಗಲಾಟೆ ಮಾಡಕೂಡದು – ಎಂದು ದಪ್ಪಕ್ಷರಗಳಲ್ಲಿ ಬರೆದಿತ್ತು. ರಂಗಣ್ಣ ಅವುಗಳನೆಲ್ಲಾ ನೋಡಿ ತೃಪ್ತಿಪಟ್ಟುಕೊಂಡನು. "ಮೇಷ್ಟ್ರೇ! ಹಿಂದೆ ಸಾಹೇಬರು ಬಂದಾಗ ಈ ನೋಟೀಸ್ ಬೋರ್ಡನ್ನು ಸಾಹೇಬರು ಇಲ್ಲಿ ಹಾಕಿರಲಿಲ್ಲವೇ?" ಎಂದು ಕೇಳಿದನು.

ಹಾಕಿದ್ದೆ ಸ್ವಾಮಿ! ಎಲ್ಲವನ್ನೂ ಹಾಕಿದ್ದೆ! ಏನು ಹಾಕಿದ್ದರೆ ಏನು? ನನ್ನ ಗ್ರಹಚಾರ! ತಮ್ಮ ಜುಲ್ಮಾನೆ ಆರ್ಡರು ನಿನ್ನೆ ನನ್ನ ಕೈಗೆ ತಲುಪಿತು ಸ್ವಾಮಿ! ಅದನ್ನು ನೋಡಿ ಎದೆಯೊಡೆದು ಹೋಯಿತು. ಅನ್ನ ನೀರು ಮುಟ್ಟಿದ್ದರೆ ಕೇಳಿ! ಆ ಸೂರ್ಯನಾರಾಯಣನ ಆಣೆ!" ಎಂದನು.

ಪ್ರಶ್ನೆಗಳು :

43. ಅ) ತಿಪ್ಪೇನಹಳ್ಳಿಯ ಪಾಠಶಾಲೆಯ ನೋಟೀಸ್ ಬೋರ್ಡಿನ ಮೇಲೆ ಏನೆಂದು ಬರೆಯಲಾಗಿತ್ತು?

43. ಬ) ರಂಗಣ್ಣ ತಿಪ್ಪೇನಹಳ್ಳಿ ಶಾಲೆಗೆ ಭೇಟಿ ನೀಡಲು ಕಾರಣವೇನು?

**XIV. ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಧಾರವಾಡದ ಸಾಧನಕೇರಿಯ ನಿವಾಸಿ 'ಹರ್ಷಿತಾ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ 'ಸಾರ್ವಜನಿಕ ಶೌಚಾಲಯ' ನಿರ್ಮಿಸಿಕೊಡುವಂತೆ ಕೋರಿ ಮಹಾನಗರಪಾಲಿಕೆಯ ಆಯುಕ್ತರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ 'ಅಥರ್ವ' ಎಂದು ಭಾವಿಸಿಕೊಂಡು, 'ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ' ಕಾರ್ಯಕ್ರಮವನ್ನು ವಿವರಿಸಿ, ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಸಿದ್ಧಾಂತ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

45. ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯರ ಸಾಧನೆ

ಅಥವಾ

ಶಾಲಾ ಆವರಣ ಹಾಗೂ ಶೌಚಾಲಯ ಸ್ವಚ್ಛತೆ

# 9 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಮೌಲ್ಯಾಂಕನ – 2024–25

## ವಿಷಯ : ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಒಟ್ಟು ಪ್ರಶ್ನೆಗಳ ಸಂಖ್ಯೆ : 45.** **ವಿಷಯ ಸಂಕೇತ : 01K**
**ಸಮಯ : 3 – 15 ಗಂಟೆಗಳು** **ಗರಿಷ್ಠ ಅಂಕಗಳು : 100**

## ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. **'ಹುಲಿದೊಗಲು'** ಪದದಲ್ಲಿ ಆಗಿರುವ ಸಂಧಿಯಿದು;
   ಎ) ಲೋಪ ಬಿ) ಆಗಮ
   ಸಿ) ಆದೇಶ ಡಿ) ಜಶ್ತ್ವ
   **ಉತ್ತರ : (ಸಿ) ಆದೇಶ**
2. ಇವುಗಳಲ್ಲಿ ಕ್ರಿಯಾ ಸಮಾಸಕ್ಕೆ ಉದಾಹರಣೆಯಾದ ಪದವಿದು;
   ಎ) ಕೆಂದಾವರೆ ಬಿ) ಚಕ್ರಪಾಣಿ
   ಸಿ) ಅಂಗೈ ಡಿ) ಕೈಮುಗಿ
   ಉತ್ತರ : (ಡಿ) ಕೈಮುಗಿ
3. **'ಅರಸನತ್ತಣಿಂ'** ಪದದಲ್ಲಿರುವ ವಿಭಕ್ತಿಯ ಹೆಸರು;
   ಎ) ತೃತೀಯಾ ಬಿ) ಚತುರ್ಥೀ
   ಸಿ) ಸಪ್ತಮೀ ಡಿ) ಪಂಚಮೀ
   **ಉತ್ತರ : (ಡಿ) ಪಂಚಮೀ**
4. **'ಪ್ರತ್ಯುತ್ತರ'** ಪದವು ಈ ಸಂಧಿಗೆ ಉದಾಹರಣೆಯಾಗಿದೆ;
   ಎ) ಯಣ್ ಬಿ) ಗುಣ
   ಸಿ) ಯ ಕಾರಾಗಮ ಡಿ) ಶ್ಚುತ್ವ
   **ಉತ್ತರ : (ಎ) ಯಣ್**
5. ಜನರು ಅಂಗಡಿಗೆ ಹೋಗುತ್ತಾರೆ – ವಾಕ್ಯವು ಈ ಕಾಲರೂಪಕ್ಕೆ ಉದಾಹರಣೆಯಾಗಿದೆ;
   ಎ) ಭೂತಕಾಲ ಬಿ) ಭವಿಷ್ಯತ್ಕಾಲ
   ಸಿ) ವರ್ತಮಾನಕಾಲ ಡಿ) ಸರ್ವಕಾಲ
   **ಉತ್ತರ : (ಸಿ) ವರ್ತಮಾನ ಕಾಲ**
6. **'ಜಯವಾಗಲಿ'** ಪದವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;
   ಎ) ವಿಧ್ಯರ್ಥಕ ಬಿ) ಸಂಭಾವನಾರ್ಥಕ
   ಸಿ) ನಿಷೇಧಾರ್ಥಕ ಡಿ) ಪ್ರಶ್ನಾರ್ಥಕ
   **ಉತ್ತರ : (ಎ) ವಿಧ್ಯರ್ಥಕ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4**

**(ಪ್ರತಿ ಸರಿಯುತ್ತರಕ್ಕೆ 1 ಅಂಕ)**

7. ಧಾರವಾಡ : ಅಂಕಿತನಾಮ : : ವಿಜ್ಞಾನಿ : **ಅನ್ವರ್ಥನಾಮ**
8. ಮಲಗು : ಅಕರ್ಮಕ ಧಾತು : : ಓದು : **ಸಕರ್ಮಕ ಧಾತು**
9. ರಾಯ : ರಾಜ : : ಸಿರಿ : **ಶ್ರೀ**
10. ಪತ್ರ : ಎಲೆ : : ಚಕ್ಕಡಿ : **ಗಾಡಿ**

## III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7*1=7

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

11. **ಜಯಪುರದ ಜನರಿಗೆ ಯಾವ ಯಾವ ಬಣ್ಣಗಳು ಇಷ್ಟ?**
ಜಯಪುರ ಜನರಿಗೆ **ಕೆಂಪು, ಕಿತ್ತಳೆ, ಹಳದಿ** ಬಣ್ಣಗಳು ಇಷ್ಟ.
12. **ರಾಧಾಕೃಷ್ಣನ್ ಅವರ ಜನ್ಮದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತದೆ?**
ರಾಧಾಕೃಷ್ಣನ್ ಅವರ ಜನ್ಮ ದಿನವನ್ನು **'ರಾಷ್ಟ್ರೀಯ ಶಿಕ್ಷಕರ ದಿನಾಚರಣೆ'** ಎಂದು ಆಚರಿಸಲಾಗುತ್ತದೆ.
13. **ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ?**
ಡೊಳ್ಳುಕುಣಿತ **ಹಾಲುಮತ ಸಮುದಾಯದ ಬೀರೇಶ್ವರ ಸಂಪ್ರದಾಯಕ್ಕೆ** ಸೇರಿದ ಕುಣಿತವಾಗಿದೆ.
14. **ನಂಬಿಯಣ್ಣನ ಪೂರ್ವಜನ್ಮದ ಹೆಸರೇನು?**
ನಂಬಿಯಣ್ಣನ ಪೂರ್ವಜನ್ಮದ ಹೆಸರು **ಪುಷ್ಪದತ್ತ.**
15. **ಮುದ್ದು ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?**
ಜೋಡಿ ಪಾರಿವಾಳಗಳು ಒಂದನ್ನೊಂದು ಅಗಲದೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.
16. **ಕಡಿದೊಗೆಯಬೇಕಾದ ಪಾಶಗಳು ಯಾವುವು?**
ಕಡಿದೊಗೆಯಬೇಕಾದ ಪಾಶಗಳು **ಜಾತಿ, ಕುಲ, ಮತ ಧರ್ಮಗಳು.**
17. **ಪುಟ್ಟಹಕ್ಕಿಗೆ ಭೂಮಿ– ಆಕಾಶದಲ್ಲಿ ಯಾರ ಭಯವಿದೆ?**
ಪುಟ್ಟಹಕ್ಕಿಗೆ ಭೂಮಿಯಲ್ಲಿ **ಭುಜಂಗನ** ಹಾಗೂ ಆಕಾಶದಲ್ಲಿ **ಗಿಡುಗನ** ಭಯವಿದೆ.

## IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

18. **ಜಯಪುರದಲ್ಲಿರುವ ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.**
ಜಯಪುರದ ಅಂಬೇರ ಅರಮನೆಯ ಆವರಣದ ತಗ್ಗಿನ ಕಣಿವೆಯ ತಳದಲ್ಲಿ ಮೀರಾಬಾಯಿಯ ದೇವಾಲಯ ಕಾಣಿಸುತ್ತದೆ. ಇದು ಆಕೆ ಗಿರಿಧರ ನಾಗರನನ್ನು ಪೂಜಿಸಿದ ಸ್ಥಳ. ಕೆಳಗಿಳಿದು ಹೋಗಿ ಗುಡಿಯನ್ನು ನೋಡಿದರೆ ಅದರ ಸೊಬಗು ಚೆನ್ನಾಗಿ ಕಾಣುತ್ತದೆ. ನಕ್ಷತ್ರಾಕೃತಿಯನ್ನು ತುಂಬಿಕೊಂಡ ಗರ್ಭಗೃಹ, ನವರಂಗಗಳು ಬಹಳ ಸೊಬಗಿನಿಂದ ಕೂಡಿದೆ. ಹೀಗೆ ಜಯಪುರದ ಅಂಬೇರ ಅರಮನೆಯ ಆವರಣದಲ್ಲಿರುವ ಮೀರಾಬಾಯಿ ದೇವಾಲಯವು ಬಹುಸುಂದರವಾಗಿದೆ.
19. **ರಾಧಾಕೃಷ್ಣನ್ ಅವರು ಶಿಕ್ಷಣದ ಮಹತ್ತ್ವವನ್ನು ಹೇಗೆ ವಿವರಿಸಿದ್ದಾರೆ?**
ರಾಧಾಕೃಷ್ಣನ್ ಅವರು ಶಿಕ್ಷಣದ ಮಹತ್ತ್ವವನ್ನು ಮನಗಂಡಿದ್ದರು. ಅವರು "ಶಿಕ್ಷಣ ಜೀವನದ ಅವಿಭಾಜ್ಯ ಅಂಶ. ಅದು ಮಾನವನನ್ನು ಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ" ಎಂದು ವಿವರಿಸಿದ್ದಾರೆ.
20. **ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ? ವಿವರಿಸಿ.**
ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ವೀರಗಾಸೆ ಕುಣಿತದವರು ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ ಕಾಲ್ಗೆಜ್ಜೆ ಧರಿಸುತ್ತಾರೆ.
21. **ಶಾಸನಗಳನ್ನು ಹಾಕಿಸುವುದರ ಬಗೆಗೆ ಬಸವಣ್ಣನವರ ಅಭಿಪ್ರಾಯವೇನು?**
"ಒಂದು ಹೊಸ ಶಾಸನವನ್ನು ಬರೆಸುವುದಕ್ಕೆ ಒಂದು ಹೊಸಯುದ್ಧ, ಐನೂರು ಹೊಸ ವೀರಗಲ್ಲು, ಸಾವಿರ ಹಸಿವಿಧವೆಯರ ದುಃಖ. ಈ ಪರಾಕ್ರಮದ ವೆಚ್ಚಕ್ಕೆ ಹೊಸತೆರಿಗೆ. ಅರಮನೆಯಲ್ಲಿ ಜನರಿಗೆ ಬಿಟ್ಟಿ ಚಾಕರಿ, ಆಶ್ರಯ ಹಾಗೂ ಅವರ ಗೋಳು. ಕೊರೆದಿಟ್ಟ ಅಕ್ಷರಗಳನ್ನು ಓದುವುದಕ್ಕೆ ಕಣ್ಣು ಬೇಕು; ಹಾಡುವುದಕ್ಕೆ ನಾಲಗೆ ಬೇಕು; ಈ ಸ್ಥಾವರ ಶಿಲೆಗಳಿಂದ ಏನೂ ಆಗುವುದಿಲ್ಲ. ಆದ್ದರಿಂದ ನಾವು ಮೊದಲು ಮನುಷ್ಯರ ಪರಿವೆ ಮಾಡಬೇಕು" ಎಂದು ಬಸವಣ್ಣನವರು ಅಭಿಪ್ರಾಯಪಡುತ್ತಾರೆ.

**22.** **ಪಾರಿವಾಳಗಳ ಆನಂದಕ್ಕೆ ಕಾರಣವೇನು?**

ದಟ್ಟ ಕಾಡಿನಲ್ಲಿದ್ದ ಒಂದು ಹೆಮ್ಮರದ ಪೊಟರೆಯಲ್ಲಿ ಮುದ್ದು ಬಿಳಿ ಪಾರಿವಾಳಗಳ ಜೋಡಿ ಪ್ರೀತಿಯಿಂದ ಜೀವನ ನಡೆಸುತ್ತಿದ್ದವು. ಅವು ಮರದ ಪೊಟರೆಯಲ್ಲಿ ಮೊಟ್ಟೆ ಇಟ್ಟವು. ಆ ಮೊಟ್ಟೆಯೊಡೆದು ಮರಿಗಳು ಹೊರಬಂದವು. ಆ ಮುದ್ದು ಮರಿಗಳ ಮಧುರ ಸದ್ದು ಕೇಳಿ ಪಾರಿವಾಳಗಳು ಆನಂದಿಸಿದವು.

**23.** **ಹರಿಶ್ಚಂದ್ರನು ಮುತ್ತಿನ ಸತ್ತಿಗೆಯನ್ನು ಏಕೆ ಕೊಡಲು ಸಾಧ್ಯವಿಲ್ಲ ಎಂದು ಹೇಳಿದನು?**

ಹರಿಶ್ಚಂದ್ರನು ಗಾನರಾಣಿಯರನ್ನು ಕುರಿತು "ಸೂರ್ಯವಂಶದ ಪರಂಪರೆಯಲ್ಲಿ ಹುಟ್ಟಿದ ರಾಜರಿಗೆ ಪಟ್ಟವನ್ನು ಕಟ್ಟುವ ಸಮಯದಲ್ಲಿ ಸತ್ತಿಗೆಯು ಇಲ್ಲದಿದ್ದರೆ ದೊರೆತನವು ಶೋಭಿಸುವುದಿಲ್ಲ. ಭೂಮಿಯಲ್ಲಿ, ಯುದ್ಧರಂಗದಲ್ಲಿ ಸತ್ತಿಗೆಯನ್ನು ಕಂಡ ಶತ್ರುಗಳು ನಿಲ್ಲುವುದಿಲ್ಲ. ಸತ್ತಿಗೆಯ ಕೆಳಗೆ ಆವರಿಸಿರುವ ನೆರಳಿನಲ್ಲಿ ಯಾವನು ಇರುವನೋ ಅತನಿಗೆ ವಿಪತ್ತು, ಅಡಚಣೆಗಳು, ಬಡತನ, ರೋಗ, ಅಪಕೀರ್ತಿ, ಸೋಲು, ಭಯ ಇಲ್ಲವಾಗುವುದು. ಆದ್ದರಿಂದ ಸತ್ತಿಗೆಯನ್ನು ಕೊಡಲು ಸಾಧ್ಯವಿಲ್ಲ" ಎಂದನು.

**24.** **ಶಬಲೆಯು ಹೇಳಿದಂತೆ ಪೋರ್ಚುಗೀಸರು ಯಾವ ಕಾರಣಗಳಿಗಾಗಿ ಯುದ್ಧಕ್ಕೆ ಸಿದ್ಧರಾಗಿದ್ದರು?**

ಚೆನ್ನಭೈರಾದೇವಿಗೆ ಬುದ್ಧಿಕಲಿಸಬೇಕೆಂದು ಪೋರ್ಚುಗೀಸರು ಹೊನ್ನಾವರದ ಮೇಲೆ ದಾಳಿ ಮಾಡಿ, ಇಡೀ ಹೊನ್ನಾವರ ಪಟ್ಟಣದಲ್ಲಿರುವ ಮನೆ, ಕೊಟ್ಟಿಗೆ, ಅಂಗಡಿ, ದೇವಾಲಯ, ಮಸೀದಿ, ಬಸದಿ ಎಲ್ಲವನ್ನೂ ಸುಟ್ಟುಹಾಕಲು ತೀರ್ಮಾನಿಸಿದ್ದರು. ಪೋರ್ಚುಗೀಸರ ಸುಮಾರು ನೂರಾಮೂವತ್ತು ಪರಂಗಿ ನಾವೆಗಳು ಅಂಜುದ್ವೀಪವನ್ನು ಬಿಟ್ಟಿದ್ದವು. ಎರಡೂವರೆ ಸಾವಿರ ಆಸ್ತ್ರಸಜ್ಜಿತ ಯೋಧರು. ಅರ್ಧದಷ್ಟು ಯೋಧರು ಕುದುರೆಗಳ ಮೇಲೆ ಬರುತ್ತಿದ್ದರು. ಅವರು ಈ ಸಲ ಸಮುದ್ರಯುದ್ಧದ ಜೊತೆಗೆ ಭೂಯುದ್ಧಕ್ಕೂ ಸಿದ್ಧರಾಗಿ ಬರುತ್ತಿದ್ದರು

**25.** **ಕವಿ ರತ್ನಾಕರವರ್ಣಿಯು ತನ್ನ ಕೃತಿಯನ್ನು ಬೇರೆಬೇರೆ ಭಾಷಿಕರು ಹೇಗೆ ಹೊಗಳಬೇಕೆಂದು ಬಯಸುವನು?**

"ಕನ್ನಡಿಗರು 'ಅಯ್ಯಾ ನಿನ್ನ ಕೃತಿ ಚೆನ್ನಾಗಿದೆ' ಎನ್ನಬೇಕು. ತೆಲುಗರು 'ರಯ್ಯಾ ಮಂಚಿದಿ' ಎಂದೆನ್ನಬೇಕು. ತುಳುವರು ಸಂತೋಷದಿಂದ 'ಅಯ್ಯಾ ಎಂಚ ಪೋರ್ಲಾಂಡ್' ಎಂದು ಹೇಳಬೇಕು. ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೊಗಳಬೇಕು" ಎಂದು ಕವಿಯು ಬಯಸುವನು.

**26.** **ದುರ್ಗಪ್ಪನು ಶಂಕರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿಮಾತುಗಳಾವುವು?**

ದುರ್ಗಪ್ಪ ಶಂಕರಣ್ಣನಿಗೆ "ಕುಡಿ ತಮ್ಮಾ, ಜೀವ ಬದುಕಲಿ ಮೊದಲು. ಜೀವಕ್ಕೆ ಯಾವ ಕುಲವೂ ಇಲ್ಲ. ಗಾಳಿಗೆ ಕುಲ ಇದೆಯೇನು? ತಮ್ಮಾ, ನೀರಿಗೆ ಕುಲ ಇದೆಯೇನು? ತಮ್ಮಾ, ನೆಲಕ್ಕ ಕುಲ ಇದೆಯೇನು? ಅದು ನಾವು ಮಾಡಿಕೊಂಡದ್ದು, ನೀರನ್ನು ಕುಡಿ" ಎಂದು ಕುಲದ ಬಗೆಗೆ ನೀತಿ ಮಾತುಗಳನ್ನು ಹೇಳಿದನು.

**27.** **ಪಂಢರಿಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?**

ಪಂಢರೀಬಾಯಿ ಅವರ ಅಣ್ಣ ವಿಮಲಾನಂದ ಅವರು ನಾಟಕ ಕಂಪನಿಯನ್ನು ನಡೆಸುತ್ತಿದ್ದರು. ಒಮ್ಮೆ ಕಲಾವಿದೆಯೊಬ್ಬಳು ನಾಟಕ ಪ್ರಾರಂಭವಾಗುವುದಕ್ಕೆ ಅರ್ಧಗಂಟೆ ಬಾಕಿ ಇರುವಾಗ ಬರುವುದಿಲ್ಲ ಎಂದು ಹೇಳಿದಳು. ಇದರಿಂದ ಅಂದಿನ ನಾಟಕಕ್ಕೆ ತೊಂದರೆಯಾಗುತ್ತಿತ್ತು. ಈ ಕಾರಣದಿಂದ ಪಂಢರೀಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಬೇಕಾಯಿತು.

## V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

| | |
|---:|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ವಾಕ್ಯರೂಪದಲ್ಲಿ ಬರೆಯುವುದು, ಭಾಷಾ ಶೈಲಿ** | **1 ಅಂಕ** |
| **ಒಟ್ಟು** | **3 ಅಂಕಗಳು** |

**28.** **ಸಾ. ಶಿ. ಮರುಳಯ್ಯ**

**ಶ್ರೀ ಸಾ. ಶಿ. ಮರುಳಯ್ಯ** (ಸಾಸಲು ಶಿವರುದ್ರಯ್ಯ ಮರುಳಯ್ಯ) ಅವರು **ಕ್ರಿ. ಶ. 1931** ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ **ಸಾಸಲು** ಗ್ರಾಮದಲ್ಲಿ ಜನಿಸಿದರು. ಇವರು **ನಾಟ್ಯ ಮಯೂರಿ,** ಶಿವತಾಂಡವ, ಕೆಂಗನಕಲ್ಲು, ವಚನ ವೈಭವ, ನೆಲದ ಸೊಗಡು, ವಿಜಯ ವಾತಾಪಿ, ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ ಮೊದಲಾದ 90ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇವರಾಜ್ ಬಹಾದ್ದೂರ್ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**29.** **ರಾಘವಾಂಕ**

**'ಷಟ್ಪದಿಯ ಬ್ರಹ್ಮ'** ಎಂಬ ಬಿರುದಾಂಕಿತರಾದ **ಶ್ರೀ ರಾಘವಾಂಕ** ಅವರು **ಕ್ರಿ. ಶ. ಸುಮಾರು 1225 ರಲ್ಲಿ** ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ **ಹಂಪಿಯಲ್ಲಿ** ಜೀವಿಸಿದ್ದರು. ವಿರೂಪಾಕ್ಷನ ಪರಮಭಕ್ತರಾದ ಇವರು **ಹರಿಶ್ಚಂದ್ರ ಕಾವ್ಯ,** ಸಿದ್ಧರಾಮ ಚಾರಿತ್ರ್ಯ, ವೀರೇಶ್ವರ ಚರಿತೆ, ಸೋಮನಾಥ ಚರಿತೆ, ಶರಭ ಚಾರಿತ್ರ್ಯ, ಹರಿಹರ ಮಹತ್ತ್ವ ಎನ್ನುವ ಕಾವ್ಯಗಳನ್ನು ಷಟ್ಪದಿ ಛಂದಸ್ಸಿನಲ್ಲಿ ರಚಿಸಿದ್ದಾರೆ. ಇವರು **ಉಭಯಕವಿ ಕಮಲರವಿ, ಕವಿ ಶರಭಭೇರುಂಡ, ಷಟ್ಪದಿಯ ಬ್ರಹ್ಮ** ಎನ್ನುವ ಬಿರುದುಗಳನ್ನು ಪಡೆದುಕೊಂಡಿದ್ದರು. ಇವರು **'ಷಟ್ಪದಿ ಕಾವ್ಯದ ನಿರ್ಮಾಪಕ'** ಎಂಬ ಅಗ್ಗಳಿಕೆಗೆ ಪಾತ್ರರಾಗಿದ್ದರು.

**VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

| | |
|---|---|
| **ಪ್ರಸ್ತಾರ ಹಾಕುವುದು** | **1 ಅಂಕ** |
| **ಗಣ ವಿಭಾಗಿಸುವುದು** | **1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**30.** **ಅತಿಕುಟಿಲಮನಂ ಧನಲು**

**ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ ।**

| | | |
|---|---|---|
| 4 | 4 | 4 |
| ∪∪ ∪∪ | ∪∪ — | ∪ ∪ — |
| ಅತಿಕುಟ | ಲಮನಂ | ಧನಲು |

| | | | | |
|---|---|---|---|---|
| 4 | 4 | 4 | 4 | 4 |
| ∪ ∪ — | — — | ∪ — ∪ | ∪ ∪ — | ∪ ∪ — |
| ಬ್ಧತೆಯಿಂ | ದಂ ದು | ಷ್ಟಬುದ್ಧಿ | ನುಡಿದಂ | ಪುಸಿಯಂ |

ಈ ಮೇಲಿನ ಪದ್ಯವು ಮಾತ್ರಾಗಣದ **'ಕಂದ ಪದ್ಯ'**ದಲ್ಲಿ ರಚಿತವಾಗಿದೆ.

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.** **1*3=3**

| | |
|---|---|
| **ಅಲಂಕಾರವನ್ನು ಹೆಸರಿಸುವುದು** | **1 ಅಂಕ** |
| **ಲಕ್ಷಣ ಬರೆಯುವುದು** | **1 ಅಂಕ** |
| **ಸಮನ್ವಯ ಮಾಡುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**31.** **ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ.

**ಉಪಮೇಯ** : ಭೀಮ ದುರ್ಯೋಧನರು

**ಉಪಮಾನ** : ಮದಗಜಗಳು

**ಉಪಮಾ ವಾಚಕ** : ಅಂತೆ

**ಸಮಾನ ಧರ್ಮ** : ಹೋರಾಡುವುದು

**ಸಮನ್ವಯ** : ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಈ ವಾಕ್ಯವು ಉಪಮಾಲಂಕಾಕ್ಕೆ ಉದಾಹರಣೆಯಾಗಿದೆ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

| | |
|---|---|
| ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| ಭಾಷಾ ಶೈಲಿ – ಪದಬಂಧ | 1 ಅಂಕ |
| ಒಟ್ಟು | 3 ಅಂಕಗಳು |

**32.** **ಬೆಳ್ಳಗಿರುವುದೆಲ್ಲ ಹಾಲಲ್ಲ.**

"ಗಾದೆಗಳು ವೇದಗಳಿಗೆ ಸಮಾನ" ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎನ್ನುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **"ಬೆಳ್ಳಗಿರುವುದೆಲ್ಲ ಹಾಲಲ್ಲ"** ಎನ್ನುವ ಗಾದೆಯೂ ಸಹ ಒಂದಾಗಿದೆ.

ಹಾಲು ಬೆಳ್ಳಗಿರುತ್ತದೆ; ಇದರಂತೆ ಸುಣ್ಣವೂ ಸಹ ಬೆಳ್ಳಗಿರುತ್ತದೆ; ದೂರಕ್ಕೆ ಹಾಲು ಮತ್ತು ಸುಣ್ಣಗಳ ವ್ಯತ್ಯಾಸವು ಗೊತ್ತಾಗುವುದಿಲ್ಲ. ಸುಣ್ಣದ ನೀರನ್ನು ಹಾಲೆಂದು ಭ್ರಮಿಸಿ ಕುಡಿದರೆ; ಕುಡಿದವರ ಸ್ಥಿತಿ ಚಿಂತಾಜನಕವಾಗುತ್ತದೆ. ಹಾಗೆಯೇ ಹಾಲನ್ನು ಸುಣ್ಣದ ನೀರೆಂದು ಭಾವಿಸಿ ಗೋಡೆಗೆ ಬಳಿಯಲು ಬಳಸಿದರೆ ಹಣ ವ್ಯರ್ಥವಾಗುತ್ತದೆ. ವ್ಯಕ್ತಿ ಅಥವಾ ವಸ್ತುವಿನ ಹೊರಬಣ್ಣವನ್ನು ನೋಡಿ ಬೆಲೆ ಕೊಡುವುದು, ಗೌರವಿಸುವುದು, ವ್ಯವಹರಿಸುವುದು ಅಪಾಯಕಾರಿ ಹಾಗೂ ದುಃಖಕ್ಕೆ ಕಾರಣ ಆಗಬಹುದು. ಕೆಲವರು ಅತಿಯಾದ ವಿನಯವನ್ನು, ಗಾಂಭೀರ್ಯವನ್ನು ತೋರಿಸಿ; ಆಗಬೇಕಾದ ಕಾರ್ಯ ಆಗುವವರೆಗೆ ಹೊಗಳಿ; ಕಾರ್ಯಸಾಧನೆಯನ್ನು ಮಾಡಿಕೊಂಡು; ಆನಂತರ ಮೋಸಮಾಡಿ ಹೋಗುತ್ತಾರೆ. ಆದ್ದರಿಂದ ಯಾರ ಜೊತೆಯೇ ಆಗಲಿ ಸ್ನೇಹವನ್ನು, ವ್ಯವಹಾರ ಸಂಬಂಧವನ್ನು ಬೆಳೆಸಿಕೊಳ್ಳುವ ಮೊದಲು ವ್ಯಕ್ತಿಯ ಯೋಗ್ಯತೆಯನ್ನು ಅರಿಯಬೇಕು ಎನ್ನುವುದನ್ನು ಈ ಗಾದೆಯು ತಿಳಿಸುತ್ತದೆ.

**ಅಥವಾ**

**ದೂರದ ಬೆಟ್ಟ ನುಣ್ಣಗೆ**

"ಗಾದೆಗಳು ವೇದಗಳಿಗೆ ಸಮಾನ" ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎನ್ನುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **"ದೂರದ ಬೆಟ್ಟ ನುಣ್ಣಗೆ"** ಎಂಬ ಗಾದೆಯೂ ಸಹ ಒಂದಾಗಿದೆ.

ದೂರದಲ್ಲಿ ಕಾಣುವ ಬೆಟ್ಟವು ನಯವಾಗಿ, ಕಲ್ಲುಮುಳ್ಳುಗಳಿಲ್ಲದೆ, ಹಳ್ಳಕೊಳ್ಳಗಳಿಲ್ಲದೆ ಇದೆಯೇನೋ ಎಂಬಂತೆ ಭಾಸವಾಗುತ್ತದೆ. ಆದರೆ ಹತ್ತಿರ ಹೋದಾಗಲೇ ಅದು ಬಂಡೆಕಲ್ಲುಗಳ ಒರಟುತನದಿಂದಲೂ, ಕಲ್ಲುಮುಳ್ಳುಗಳಿಂದಲೂ, ಹಳ್ಳಕೊಳ್ಳಗಳಿಂದಲೂ ಕೂಡಿದೆ ಎಂಬ ಅರಿವು ಉಂಟಾಗುತ್ತದೆ. ಇದೇರೀತಿ ಎಷ್ಟೋ ವ್ಯಕ್ತಿಗಳ ಬಗ್ಗೆ ಅವರು ತುಂಬಾ ಒಳ್ಳೆಯವರೆಂದೂ, ಗುಣವಂತರೆಂದೂ ಭಾವಿಸಿರುತ್ತೇವೆ. ಆದರೆ ಅವರ ಹತ್ತಿರದ ಸಹವಾಸ ಸಿಕ್ಕಾಗಲೇ ಅವರ ಒಂದೊಂದೇ ಹುಳುಕುಗಳು ಗೊತ್ತಾಗುತ್ತಾ ಹೋಗುತ್ತವೆ. ಯಾವುದೋ ಒಂದು ಕೆಲಸ ಕೂಡ ಅತ್ಯಂತ ಸುಲಭ ಎಂದೂ, ಸಂತಸದಾಯಕ ಎಂದೂ, ಲಾಭದಾಯಕ ಎಂದೂ ಅಂದುಕೊಂಡಿರುತ್ತೇವೆ. ಆದರೆ ಆ ಕಾರ್ಯಕ್ಕೆ ಕೈಹಚ್ಚಿದಾಗಲೇ ಅದರ ಕೊರತೆಗಳ, ಸಂಕಷ್ಟಗಳ ಅರಿವಾಗುವುದು. ಆದ್ದರಿಂದ ನೋಡಿದ್ದೆಲ್ಲಾ ಸತ್ಯ ಎಂದು ಒಂದೇ ಬಾರಿಗೆ ತೀರ್ಮಾನ ತೆಗೆದುಕೊಳ್ಳದೆ, ನಿಧಾನವಾಗಿ ಅವಲೋಕಿಸಿ ತೀರ್ಮಾನಿಸಬೇಕು ಎಂಬುದನ್ನು ಈ ಗಾದೆಯು ತಿಳಿಸುತ್ತದೆ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

| | |
|---|---|
| ಆಯ್ಕೆ : ಕರ್ತೃ – ಆಕರ – ಪಠ್ಯ | 1 ಅಂಕ |
| ಸಂದರ್ಭ : ಯಾರು – ಯಾರಿಗೆ – ಯಾವಾಗ | 1 ಅಂಕ |
| ಸ್ವಾರಸ್ಯ : ಅಂತರಾರ್ಥ – ಭಾಷೆ – ಪದಬಂಧ | 1 ಅಂಕ |
| ಒಟ್ಟು | 3 ಅಂಕಗಳು |

33. **"ರಾಜ್ಯಭಾರ ಅಂದರ ಕಾಯಕ ಅದಕ್ಕ ವಂಶಾ ಇದ್ದರ ಸಾಲದು."**

**ಆಯ್ಕೆ :** ಈ ವಾಕ್ಯವನ್ನು ಶ್ರೀ ಗಿರೀಶ್ ಕಾರ್ನಾಡ್ ಅವರು ರಚಿಸಿರುವ **'ತಲೆದಂಡ'** ನಾಟಕದಿಂದ ಆಯ್ದ **'ಅಧಿಕಾರ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಬಿಜ್ಜಳನು ಮಂಚ್ಯಣಕ್ರಮಿತನೊಡನೆ ಬಸವಣ್ಣನ ಬಗ್ಗೆ ಮಾತನಾಡುವಾಗ "ನಾನು ಚಾಲುಕ್ಯರ ಸಾಮಂತನಾಗಿದ್ದಾಗ ಮಂಗಳವಾಡಕ್ಕೆ ಬಂದ ಬಸವಣ್ಣನಿಗೆ ಇಪ್ಪತ್ತು ವರ್ಷಗಳು ಸಹ ಆಗಿರಲಿಲ್ಲ, ಆಗಲೇ ಅವನು ರಾಜನಾಗುವವನಿಗೆ ವಂಶಕ್ಕಿಂತ ಯೋಗ್ಯತೆ ಮುಖ್ಯವೆನ್ನುತ್ತಿದ್ದನು" ಎನ್ನುವ ಮಾತನ್ನು ನೆನಪಿಸಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:** "ರಾಜನಾದವನು ಅಧಿಕಾರವನ್ನು ತನ್ನ ಸಾಮರ್ಥ್ಯ ಹಾಗೂ ಯೋಗ್ಯತೆಯಿಂದ ಪಡೆಯಬೇಕೇ ಹೊರತು ಆ ವಂಶದಲ್ಲಿ ಹುಟ್ಟಿದ ಕಾರಣಕ್ಕಾಗಿ ಅಲ್ಲ" ಎನ್ನುವ ಬಸವಣ್ಣನ ಅಭಿಪ್ರಾಯವು ಸ್ವಾರಸ್ಯವಾಗಿ ಅಭಿವ್ಯಕ್ತಗೊಂಡಿದೆ.

34. **"ಎಂತಹ ಅದ್ಭುತ ರಚನಾ ವೈಖರಿ ಕಾಣುತ್ತೆ ಗೊತ್ತೆ!"**

**ಆಯ್ಕೆ :** ಈ ವಾಕ್ಯವನ್ನು ಎಸ್. ಎಲ್. ಭೈರಪ್ಪ ಅವರು ರಚಿಸಿರುವ **'ನಾನು ಕಂಡಂತೆ ಡಾ. ಬಿ. ಜಿ. ಎಲ್. ಸ್ವಾಮಿ'** ಎನ್ನುವ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಸ್ವಾಮಿ ಅವರು ಲೇಖಕರನ್ನು ಕುರಿತು "ಒಂದು ಸಣ್ಣ ಕಾಂಡವನ್ನು ಕತ್ತರಿಸಿ, ವಿದ್ಯುತ್ ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಎಂತಹ ಅದ್ಭುತ ರಚನಾ ವೈಖರಿ ಕಾಣುತ್ತದೆ ಗೊತ್ತೇ?" ಎಂದು ಹೇಳಿದ ಸಂದರ್ಭದಲ್ಲಿ ಸ್ವಾಮಿ ಅವರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ಸಸ್ಯಗಳ ಕಾಂಡಗಳಲ್ಲಿ ಅದ್ಭುತವಾದ ಬಣ್ಣದ ಲೋಕವಿದೆ; ಅದನ್ನು ಕಾಣುವ ಕಣ್ಣು ನಮ್ಮದಾಗಬೇಕು" ಎನ್ನುವುದನ್ನು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

35. **"ಪುಣ್ಯಂ ಪಣ್ಣಾದಂತೆ"**

**ಆಯ್ಕೆ :–** ಈ ವಾಕ್ಯವನ್ನು **ತೀ. ನಂ. ಶ್ರೀಕಂಠಯ್ಯ** ಅವರು ಸಂಪಾದಿಸಿರುವ **ಕವಿ ಹರಿಹರ ಅವರು** ರಚಿಸಿರುವ **'ನಂಬಿಯಣ್ಣನ ರಗಳೆ'** ಕೃತಿಯಿಂದ ಆಯ್ದ **'ಹರಲೀಲೆ'** ಎಂಬ ನಡುಗನ್ನಡ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ವಿರೂಪಾಕ್ಷನು ವೃದ್ಧ ಮಾಹೇಶ್ವರನ ವೇಷವನ್ನು ಧರಿಸಿ. ಕೈಲಾಸದಿಂದ ಇಳಿದು ಚೋಳದೇಶದ ಮಣಮಂದಪುತ್ತೂರಿನ ಮದುವೆಯ ಮಂಟಪದ ಚಪ್ಪರದ ಮುಂದೆ ಬಂದು ನಿಂತ ಸಂದರ್ಭದಲ್ಲಿ ಈ ಮಾತು ಬಂದಿದೆ. ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಪುಣ್ಯವೇ ಹಣ್ಣಾದಂತೆ ವಿರೂಪಾಕ್ಷನು ಸರ್ವಾಂಗವು ಹಣ್ಣಾದ ಮುದುಕನ ವೇಷವನ್ನು ಧರಿಸಿದ್ದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

36. **"ನಡೆನುಡಿಗಳೆಡೆಯಲ್ಲಿ ಪರತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"**

**ಆಯ್ಕೆ :–** ಈ ವಾಕ್ಯವನ್ನು **ಶ್ರೀ ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕೃತಿಯಿಂದ ಆಯ್ದ **'ಹೊಸಹಾಡು' ಎಂಬ** ಕವನದಿಂದ ಆರಿಸಲಾಗಿದೆ.

**ಸಂದರ್ಭ :–** "ಸೋಮಾರಿತನ ಮತ್ತು ನಿದ್ದೆಯಿಂದ ಎಚ್ಚರಗೊಳ್ಳಬೇಕು. ವೀರತನದ ಹಾಡು ಆಕಾಶ ಭೂಮಿಗಳಲ್ಲಿ ಮೊಳಗಬೇಕು. ನಡೆನುಡಿಗಳಲ್ಲಿ ಕ್ರಾಂತಿಕಿಡಿ ಕೆರಳಬೇಕು" ಎಂದು ಕವಿಗಳು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** "ಲೋಕದ ಜನರಲ್ಲಿ 'ನಡೆಗೆ ತಕ್ಕ ನುಡಿ; ನುಡಿಗೆ ತಕ್ಕ ನಡೆ' ಇರುವ ಕ್ರಾಂತಿಕಾರಕ ಮನೋಭಾವ ಚಿಮ್ಮಬೇಕು" ಎಂಬುದನ್ನು ಕವಿಗಳು ಈ ಮಾತಿನ ಮೂಲಕ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾರೆ.

37. **"ತೃಣವ ಮುರಿಯುವುದಕೆ ಕೊಡಲಿಯು ಬೇಕೆ"**

**ಆಯ್ಕೆ :** ಈ ವಾಕ್ಯವನ್ನು ಶ್ರೀ **ದೇವಿದಾಸ** ಅವರು ರಚಿಸಿರುವ **'ಕೃಷ್ಣಸಂಧಾನ–ಭೀಷ್ಮಪರ್ವ'** ಎಂಬ ಯಕ್ಷಗಾನ ಕೃತಿಯಿಂದ ಆಯ್ದ **'ಚಕ್ರಗ್ರಹಣ'** ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ತನ್ನನ್ನು ಕೊಲ್ಲಲು ಕೋಪದಿಂದ ಚಕ್ರ ಹಿಡಿದು ನಿಂತ ಕೃಷ್ಣನನ್ನು ಕಂಡು ಹೆದರಿದ ಭೀಷ್ಮನು ರಥದಿಂದ ಇಳಿದು ಬಂದು ಕೃಷ್ಣನ ಮೃದುವಾದ ಕೈಯನ್ನು ಹಿಡಿದು ಪ್ರಾರ್ಥಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಭೀಷ್ಮನು ಕೃಷ್ಣನಿಗೆ ಈ ಮಾತನು ಹೇಳುತ್ತಾನೆ.

**ಸ್ವಾರಸ್ಯ :** ಭೀಷ್ಮನು ತನ್ನನ್ನು ಹುಲ್ಲುಕಡ್ಡಿಗೂ ಹಾಗೂ ಶ್ರೀಕೃಷ್ಣನನ್ನು ಕೊಡಲಿಗೂ ಸಮನ್ವಯಿಸಿರುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತವಾಗಿದೆ.

**38.** **"ಬಲಿಯನಿತ್ತೊಡೆ ಮುನಿವೆಂ"**

**ಆಯ್ಕೆ :** ಈ ವಾಕ್ಯವನ್ನು ಶ್ರೀ ಜನ್ನಕವಿ ಅವರು ರಚಿಸಿರುವ **'ಯಶೋಧರ ಚರಿತೆ'** ಕಾವ್ಯದಿಂದ ಆಯ್ದ **'ಬಲಿಯನಿತ್ತೊಡೆ ಮುನಿವೆಂ'** ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಚಂಡಮಾರಿಯು ಪ್ರತ್ಯಕ್ಷಳಾಗಿ " ಪ್ರಜೆಗಳೆಲ್ಲರು ನನ್ನನ್ನು ಜಲ, ಗಂಧ, ಹೂಮಾಲೆ, ಅಕ್ಕಿ, ದೂಪ, ದೀಪ, ಹವಿಸ್ಸು, ತಾಂಬೂಲ ಸಮೂಹದಿಂದ ಪೂಜಿಸುವುದು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ. ಚಂಡಮಾರಿಯು ಪ್ರಜೆಗಳೆಲ್ಲರಿಗೂ ಹೇಳುತ್ತಾಳೆ.

**ಸ್ವಾರಸ್ಯ :** ದೇವರಿಗೆ ಪೂಜೆಯನ್ನು ಮಾಡುವ ನೆಪದಲ್ಲಿ ಪ್ರಾಣಿಬಲಿ ನೀಡಿ, ಪ್ರಾಣಿಹಿಂಸೆ ಮಾಡುವುದು ತಪ್ಪು, ಇದನ್ನು ದೇವರು ಸಹ ಒಪ್ಪುವುದಿಲ್ಲ ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1*4=4**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1 ಅಂಕ)**

39. **ಹೇಮಂತ** ಋತುರಾಜನಿಳೆಗೆ ಬಂದಿಳಿವಂದು
ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ.
ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ
ಕುಸುಮ ಗಂಧವ ತರುವ **ಮರುತನಿಲ್ಲ**

ಅಥವಾ

ಹೇಮಂತನಾಳಿಕೆಯ ಕಠಿಣ ಶಾಸನವಿಂತು
ಅದಕೆ ತಲೆವಾಗುವುದೆ ಸೃಷ್ಟಿಯೊಳಮರ್ಮ
ಒಂದೊಂದು ಋತುವಿನಲಿ ಒಂದೊಂದು ರೀತಿಯಲಿ
ಸಂಸ್ಕಾರ ಪಡೆಯುವುದೆ ಜೀವಗಳ **ಧರ್ಮ**

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1*4=4**

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **3. ಅಂಕಗಳು** |
| **ಒಟ್ಟು** | **4. ಅಂಕಗಳು** |

**40.** **ಸುಲಿದ ಬಾಳೆಯ ಹಣ್ಣಿನಂದದಿ**
**ಕಳಿದ ಸಿಗುರಿನ ಕಬ್ಬಿನಂದದಿ**
**ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ ।**
**ಲಲಿತವಹ ಕನ್ನಡದ ನುಡಿಯಲಿ**
**ಘಳಿದು ತನ್ನೊಳು ತನ್ನ ಮೋಕ್ಷವ**
**ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ॥**

**'ಕನ್ನಡ ನಾಡು-ನುಡಿ'** ಮಹತ್ತ್ವನ್ನು ಪರಿಚಯಿಸುವ ಪದ್ಯಗಳ ಸಂಗ್ರಹಕ್ಕಾಗಿ **ಕವಿ ಶ್ರೀ ಮಹಲಿಂಗರಂಗ** ಅವರು ರಚಿಸಿರುವ **'ಅನುಭವಾಮೃತ'** ಎಂಬ ಕೃತಿಯಿಂದ ಆಯ್ದ ಪದ್ಯ ಇದಾಗಿದೆ.

ಈ ಪದ್ಯಭಾಗದಲ್ಲಿ ಕವಿ ಮಹಲಿಂಗರಂಗ ಅವರು ಕನ್ನಡ ಭಾಷೆಯ ಶ್ರೇಷ್ಠತೆಯನ್ನು ಬಹುಮನೋಜ್ಞವಾಗಿ ವರ್ಣಿಸಿದ್ದಾರೆ.

ಮಹಲಿಂಗರಂಗ ಅವರು "ಸುಲಿದ ಬಾಳೆಯ ಹಣ್ಣಿನಂತೆ; ಪಕ್ವವಾದ ಜಲ್ಲೆ ಕಬ್ಬಿನಂತೆ; ತಣ್ಣಗಾದ ಹಾಲಿನಂತೆ ಸುಲಭವಾಗಿರುವ, ಲಲಿತವಾಗಿರುವ ಕನ್ನಡ ಭಾಷೆಯನ್ನು ಅರಿತು, ತನ್ನಲ್ಲಿ ಮೋಕ್ಷವನ್ನು ಗಳಿಸಿಕೊಂಡರೆ

ಸಾಲದೇ? ಸಂಸ್ಕೃತ ಭಾಷೆಯಲ್ಲಿ ಅಂತಹುದು ಏನಿದೆ?" ಎಂದು ಪ್ರಶ್ನಿಸುತ್ತಾರೆ. "ಸಂಸ್ಕೃತ ಭಾಷೆಯಷ್ಟೇ ಮಹತ್ತ್ವವು ಕನ್ನಡ ಭಾಷೆಗೂ ಇದೆ" ಎಂಬುದು ಕವಿಯ ನುಡಿಯಾಗಿದೆ.
ಈ ಪದ್ಯಭಾಗದಲ್ಲಿ "ಕನ್ನಡ ಭಾಷೆಯು ಕಲಿಯಲು ಮತ್ತು ಓದಲು ಬಹುಸುಲಭವಾದುದು" ಎನ್ನುವ ಮೌಲ್ಯಯುತ ಸಂದೇಶವು ಅಭಿವ್ಯಕ್ತಗೊಂಡಿದೆ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **4 ಅಂಕಗಳು** |

**41. ರಾಜ್ಯಾಡಳಿತದ ವಿಷಯದಲ್ಲಿ ರಾಮನ ಉಪದೇಶವನ್ನು ಸಂಗ್ರಹವಾಗಿ ಬರೆಯಿರಿ.**

ರಾಜನು ಅಮಾತ್ಯರೊಡನೆ ರಹಸ್ಯವಾಗಿ ಮಂತ್ರಾಲೋಚನೆಯನ್ನು ಮಾಡಿ ನಿರ್ಣಯಕ್ಕೆ ಬರಬೇಕು. ರಾಜನಾದವನು ಅಲ್ಪಪ್ರಯತ್ನದಿಂದ ಬಹುಫಲವನ್ನು ಕೊಡುವಂತಹ ಕಾರ್ಯವನ್ನು ಕೂಡಲೇ ಆಚರಣೆಗೆ ತರಬೇಕು. ಪಂಡಿತರನ್ನು ಆದರಿಸಬೇಕು. ರಾಜನು ಮೇಧಾವಿಯೂ, ಶೂರನೂ ಕಾರ್ಯದಕ್ಷನೂ ರಾಜ್ಯಶಾಸ್ತ್ರವಿಶಾರದನೂ ಆದ ಅಮಾತ್ಯನನ್ನು ನೇಮಿಸಿಕೊಳ್ಳಬೇಕು. ಉತ್ತಮರಾದ ಅಧಿಕಾರಿಗಳನ್ನು ಮೇಲ್ಮಟ್ಟದ ಕಾರ್ಯದಲ್ಲಿಯೂ, ಮಧ್ಯಮರನ್ನು ಸಾಮಾನ್ಯ ಕಾರ್ಯದಲ್ಲಿಯೂ, ಅಷ್ಟೇನೂ ಕಾರ್ಯಕುಶಲಿಗಳಲ್ಲದ ವ್ಯಕ್ತಿಗಳನ್ನು ಕೆಳಮಟ್ಟದ ಕೆಲಸದಲ್ಲಿಯೂ ನೇಮಿಸಬೇಕು. ಅತ್ಯುಚ್ಚವಾದ ಅಧಿಕಾರದಲ್ಲಿ ಲಂಚವನ್ನು ತೆಗೆದುಕೊಳ್ಳದ, ಪ್ರಾಮಾಣಿಕರಾದ, ಸಂದೇಹಾತೀತರಾದ, ಶ್ರೇಷ್ಠರಾದ ಅಮಾತ್ಯರನ್ನು ಪರೀಕ್ಷಿಸಿ ನಿಯೋಜಿಸಬೇಕು. ರಾಜನ ಸತ್ಕಾರದಿಂದ ಸಂತೃಪ್ತನು, ಶೂರನು, ಧೀರನು, ಲಂಚಕ್ಕೆ ಆಸೆಪಡದ ಮನಃಶುದ್ಧಿಯುಳ್ಳವನು, ಸೇನೆಯನ್ನು ವ್ಯವಸ್ಥೆಗೊಳಿಸುವುದರಲ್ಲಿ ಸಮರ್ಥನು, ಕಾರ್ಯದಕ್ಷನು, ರಾಜಭಕ್ತಿಯುಳ್ಳವನು ಆದವನನ್ನು ಸೇನಾಪತಿಯನ್ನಾಗಿ ನೇಮಿಸಿಕೊಳ್ಳಬೇಕು. ಬಲಶಾಲಿಗಳೂ, ಯುದ್ಧವಿಶಾರದರೂ, ಹಿಂದೆ ಅನೇಕ ಯುದ್ಧಗಳನ್ನು ಮಾಡಿ ಪ್ರಸಿದ್ಧರಾದವರೂ, ವೀರರೂ ಆದ ಸೇನಾನಾಯಕರಿಗೆ ಸೂಕ್ತಬಹುಮಾನ–ಪಾರಿತೋಷಕಗಳನ್ನು ಕೊಟ್ಟು ಸನ್ಮಾನಿಸಬೇಕು. ಸೈನಿಕರಿಗೆ ಕೊಡಬೇಕಾದ ಸಾಮಗ್ರಿಯನ್ನು, ವೇತನವನ್ನು ಕಾಲಕಾಲಕ್ಕೆ ನೀಡಬೇಕು. ಜ್ಞಾತಿಗಳೊಡನೆ ಪ್ರೀತಿಯಿಂದಿರಬೇಕು. ದೇಶದಲ್ಲಿಯೇ ಹುಟ್ಟಿ ಬೆಳೆದ ವಿದ್ವಾಂಸನನ್ನು ದೂತನನ್ನಾಗಿ ನೇಮಿಸಿಕೊಳ್ಳಬೇಕು. ಶತ್ರುಪಕ್ಷದಲ್ಲಿ ಮಂತ್ರಿಯೇ ಮೊದಲಾದ 18 ಇಲಾಖೆಗಳು ಹೇಗೆ ನಡೆದುಕೊಳ್ಳುತ್ತಿವೆಯೆಂದು ಪರೀಕ್ಷಿಸಲು ಒಬ್ಬೊಬ್ಬರ ಮೇಲೆ ಮೂವರು ಗೂಢಚಾರರಂತೆ ನೇಮಿಸಬೇಕು. ರಾಜನಾದವನು ರಾಜ್ಯದ ಆದಾಯವು ವ್ಯಯಕ್ಕಿಂತ ಹೆಚ್ಚಾಗಿರುವಂತೆ ಜಾಗ್ರತೆ ವಹಿಸಬೇಕು. ರಾಜ್ಯದ ಬೊಕ್ಕಸದಲ್ಲಿ ಸಂಗ್ರಹಿಸುವ ಸಂಪತ್ತೆಲ್ಲವೂ ರಾಜ್ಯದ ಅಭಿವೃದ್ಧಿಯ ಕೆಲಸ ಕಾರ್ಯಗಳಿಗೆ ವಿನಿಯೋಗಿಸಬೇಕು. ಇವು ರಾಜ್ಯಾಡಳಿತದಲ್ಲಿ ವಿಷಯದಲ್ಲಿ ರಾಮನು ನೀಡಿದ ಉಪದೇಶಗಳಾಗಿವೆ.

**ಅಥವಾ**

**ರಾಜನಲ್ಲಿ ತಲೆದೋರಬಹುದಾದ ಹದಿನಾಲ್ಕು ದೋಷಗಳ ಬಗ್ಗೆ ವಿವರಿಸಿ.**

ರಾಜನಲ್ಲಿ ಸಂಭವಿಸಬಹುದಾದ ದೋಷಗಳು ಹದಿನಾಲ್ಕು. 1. ನಾಸ್ತಿಕ ಬುದ್ಧಿ. 2. ಸುಳ್ಳು. 3. ಸಿಟ್ಟು. 4. ಅನವಧಾನ. 5. ಚಟುವಟಿಕೆಯಿಲ್ಲದೆ ಕೆಲಸವನ್ನು ತಡಮಾಡುವುದು. 6. ಪ್ರಾಜ್ಞರಾದ ಸಜ್ಜನರೊಡನೆ ಸೇರದಿರುವುದು. 7. ಸೋಮಾರಿತನ. 8. ಪಂಚೇಂದ್ರೀಯಗಳಿಗೆ ಅಧೀನನಾಗಿ ಇಂದ್ರಿಯ ಚಾಪಲ್ಯದಲ್ಲಿ ಮುಳುಗುವುದು. 9. ಮಂತ್ರಿಗಳೊಡನೆ ಸಮಾಲೋಚಿಸದೆ ರಾಜ್ಯಕಾರ್ಯಗಳಲ್ಲಿ ತಾನೊಬ್ಬನೇ ನಿರ್ಧಾರವನ್ನು ತೆಗೆದುಕೊಳ್ಳುವುದು. 10. ಅನುಭವವಿಲ್ಲದ ಅವಿವೇಕಿಗಳೊಡನೆ ಸಮಾಲೋಚಿಸುವುದು. 11. ನಿಶ್ಚಯಿಸಿದ ಕಾರ್ಯಗಳನ್ನು ಆರಂಭಿಸದಿರುವುದು. 12. ಮಂತ್ರಾಲೋಚನೆಯನ್ನು ರಹಸ್ಯವಾಗಿಡದೆ ಬಹಿರಂಗಪಡಿಸುವುದು. 13. ಮಂಗಳಕರವಾದ ಶುಭಕಾರ್ಯವನ್ನು ಮಾಡದಿರುವುದು. 14. ಎಲ್ಲ ಶತ್ರುಗಳ ಮೇಲೂ ಏಕಕಾಲದಲ್ಲಿ ಯುದ್ಧಾರಂಭ ಮಾಡುವುದು. ರಾಜನು ಈ ಹದಿನಾಲ್ಕು ರಾಜದೋಷಗಳಿಗೆ ಅವಕಾಶವನ್ನು ಕೊಡಬಾರದು. ರಾಜನಾದವನು ಯಾವುದೇ ಪ್ರಮುಖ ನಿರ್ಣಯ ತೆಗೆದುಕೊಳ್ಳುವ ಮೊದಲು ನಾಲ್ವರು ಪ್ರಾಜ್ಞ ಮಂತ್ರಿಗಳೊಡನೆ ಒಟ್ಟಿಗೆ ಸಮಾಲೋಚಿಸಬೇಕು. ಆನಂತರ ಒಬ್ಬೊಬ್ಬರಾಗಿ ಕರೆದು ಪ್ರತ್ಯೇಕವಾಗಿ ಅವರ ಅಭಿಪ್ರಾಯವನ್ನು

ಅರಿತುಕೊಳ್ಳಬೇಕು. ರಾಜನು ಪೂರ್ವಿಕರ ವ್ಯಕ್ತಿತ್ವದ ಅತ್ಯುತ್ತಮ ಅಂಶಗಳನ್ನು ಅಳವಡಿಸಿಕೊಳ್ಳಬೇಕು. ಬುದ್ಧಿಶಾಲಿಯಾದ ರಾಜನು ದಂಡಾಧಿಕಾರಿಯಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಬೇಕು.

42. **'ಗುರು ಕರುಣೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

'ಗುರುಕರುಣೆ' ಪದ್ಯದಲ್ಲಿ ತತ್ತ್ವಪದಕಾರರು "ಗುರುಕರುಣೆ ಇಲ್ಲದವನ ಸ್ನೇಹವನ್ನು ಸಾಯುವತನಕ ಮಾಡಬಾರದು. ಸಾಧುಸತ್ಪುರುಷರ ಸೇವೆಯನ್ನು ಮಾಡುವುದು ಬಹು ಉತ್ತಮ. ತಾನಾಡುವ ಮಾತಿನಂತೆ ನಡೆದುಕೊಳ್ಳದವನ ಸ್ನೇಹವನ್ನು ಜನ್ಮಜನ್ಮಾಂತರದಲ್ಲೂ ಮಾಡಬಾರದು. ಹೀನಮನುಷ್ಯನ ಸ್ನೇಹವನ್ನು ಮಾಡಿ ಕೆಡಲುಬಾರದು. ಹೆಣ್ಣುಮಕ್ಕಳನ್ನು ಅಕ್ಕತಂಗಿಯರೆಂದು ಬಾಯಲ್ಲಿ ಕರೆದು, ಅವರನ್ನು ಕೆಟ್ಟ ದೃಷ್ಟಿಯಲ್ಲಿ ನೋಡಬಾರದು. ನಿತ್ಯವೂ ಕಾಲಕಾಲಕ್ಕೆ ಊಟವನ್ನು ಮಾತ್ರ ಮಾಡಿ, ದುಡಿಯದೆ ಸೋಮಾರಿತನದಲ್ಲಿ ಕಾಲವನ್ನು ಕಳೆಯಬಾರದು. ಮೇಲುಕೀಳು ಎಂಬ ಭೇದಭಾವ ಮಾಡಬಾರದು. ಇರುವತನಕ ಗುರುಮಹಾಂತೇಶನ ಪಾದಸೇವೆಯನ್ನು ಮಾಡುವುದು ಬಹಳ ಉತ್ತಮವಾದುದು" ಎಂದು ಕಡಕೋಳ ಮಡಿವಾಳಪ್ಪ ಅವರು ಹೇಳಿದ್ದಾರೆ.

**ಅಥವಾ**

**'ಬಿದಿರು' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

"ಬಿದಿರು ಎಲ್ಲರಿಗೂ ಬೇಕಾದ ವಸ್ತುವಾಗಿದೆ. ಬಿದಿರು ಹುಲ್ಲಿನ ಜಾತಿಗೆ ಸೇರಿದ ಸಸ್ಯವಾಗಿದೆ. ಹುಟ್ಟುವಾಗ ಹುಲ್ಲಿನಂತೆ ಕಾಣುವ ಬಿದಿರು ಬೆಳೆಯುತ್ತಾ ಮೈತುಂಬಿಕೊಳ್ಳುತ್ತದೆ. ಬಿದಿರಿನಿಂದ ಮಕ್ಕಳನ್ನು ಮಲಗಿಸುವ ತೊಟ್ಟಿಲನ್ನು ಮಾಡುತ್ತಾರೆ. ಪಲ್ಲಕ್ಕಿಯನ್ನು ಹೊರುವ ದಂಡಿಗೆಯನ್ನು ಮಾಡುತ್ತಾರೆ. ದೇವರಪೂಜೆಗೆ ಹೂಪತ್ರೆಯನ್ನು ತರುವ ಬುಟ್ಟಿಯನ್ನು ಬಿದಿರಿನಿಂದಲೇ ಮಾಡುತ್ತಾರೆ. ಮಹಾತ್ಮರ ಕೈಯಲ್ಲಿ ಬೆತ್ತವಾಗಿ ಬಿದಿರು ಶೋಭಿಸುತ್ತದೆ. ಬಿದಿರನ್ನು ಒನಕೆಯಾಗಿ, ದೋಣಿ ನಡೆಸುವವನಿಗೆ ಕೋಲಾಗಿ, ರೈತನಿಗೆ ಧಾನ್ಯವನ್ನು ಬಿತ್ತುವ ಕೂರಿಗೆಯಾಗಿ ಉಪಯೋಗಿಸುತ್ತಾರೆ. ಬೀಸುವ ಕಲ್ಲಿನ ಗೂಟ, ಕೇರುವ ಮೊರ, ಮುದುಕರು ಊರಿ ನಡೆಯುವ ಕೋಲು, ಎಲ್ಲವೂ ಬಿದಿರೇ ಆಗಿದೆ. ಮಕ್ಕಳ ಆಟಕ್ಕೆ ಕೋಲು, ಎತ್ತಿನಗಾಡಿ, ದೇವರಿಗೆ ನಂದಿಕೋಲು, ನೆರಳುಂಟುಮಾಡಲು ಚಪ್ಪರ, ಏಕದಂಡಿಗೆ ಕೊಳವೆ, ದೇವರ ಓಲಗ, ಎಲ್ಲವೂ ಬಿದಿರಿನಿಂದ ಮಾಡಿದ್ದಾಗಿದೆ. ಶ್ರೀ ಕೃಷ್ಣ ಊದುವ ಕೊಳಲು ಕೂಡ ಬಿದಿರಿನದೇ ಆಗಿದೆ. ಹೀಗೆ ಬಿದಿರು ಬಹುಉಪಯೋಗಿ ಸಸ್ಯವಾಗಿದೆ" ಎಂದು ಸಂತ ಶಿಶುನಾಳ ಶರೀಫ ಅವರು ಹೇಳಿದ್ದಾರೆ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4[2+2]**

**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**

43. **ಪ್ರಶ್ನೆಗಳು :**

**43. ಅ) ತಿಪ್ಪೇನಹಳ್ಳಿಯ ಪಾಠಶಾಲೆಯ ನೋಟೀಸ್ ಬೋರ್ಡಿನ ಮೇಲೆ ಏನೆಂದು ಬರೆಯಲಾಗಿತ್ತು?**

ತಿಪ್ಪೇನಹಳ್ಳಿ ಪಾಠಶಾಲೆಯ ನೋಟೀಸು ಬೋರ್ಡಿನ ಮೇಲೆ (1) ಮಕ್ಕಳು ಸರಿಯಾದ ಹೊತ್ತಿಗೆ ಬರಬೇಕು. (2) ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು. (3) ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ. (4) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಯಾರೂ ಕುಳಿತು ಗಲಾಟೆ ಮಾಡಕೂಡದು – ಎಂದು ಬರೆಯಲಾಗಿತ್ತು.

**43. ಬ) ರಂಗಣ್ಣ ತಿಪ್ಪೇನಹಳ್ಳಿ ಶಾಲೆಗೆ ಭೇಟಿ ನೀಡಲು ಕಾರಣವೇನು?**

ತಿಪ್ಪೇನಹಳ್ಳಿಯ ಮೇಷ್ಟ್ರು ನಿಜವಾಗಿಯೂ ರೂಲ್ಸಿಗೆ ವಿರುದ್ಧವಾಗಿ ನಡೆಯುತ್ತಿದ್ದಾನೆಯೇ? ಇನ್ನೂ ಇತರರು ಯಾರು ಹಾಗೆ ದಾಖಲೆಯಿಲ್ಲದ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ? ನೋಡೋಣ ಎಂದು ಆಲೋಚಿಸುತ್ತ ರಂಗಣ್ಣ ತಿಪ್ಪೇನಹಳ್ಳಿಗೆ ಶಾಲೆಗೆ ಭೇಟಿ ನೀಡಿದನು.

**XIV. ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

| | |
|---|---|
| ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| ಪತ್ರದ ಒಡಲು – ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| ಭಾಷಾ ಶೈಲಿ, ಪದಬಂಧ, ವಿನ್ಯಾಸ | 1 ಅಂಕ |
| ಒಟ್ಟು | 5 ಅಂಕಗಳು |

**44.** **ನಿಮ್ಮನ್ನು ಧಾರವಾಡದ ಸಾಧನಕೇರಿಯ ನಿವಾಸಿ 'ಹರ್ಷಿತಾ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ 'ಸಾರ್ವಜನಿಕ ಶೌಚಾಲಯ' ನಿರ್ಮಿಸಿಕೊಡುವಂತೆ ಕೋರಿ ಮಹಾನಗರಪಾಲಿಕೆಯ ಆಯುಕ್ತರಿಗೆ ಪತ್ರವನ್ನು ಬರೆಯಿರಿ.**

ಇಂದ

ಹರ್ಷಿತಾ
10 ನೆಯ ತರಗತಿ
ಸಾಧನಕೇರಿ ಬಡಾವಣೆ
ಧಾರವಾಡ

ದಿನಾಂಕ : 25–03–2024
ಸ್ಥಳ : ಧಾರವಾಡ

ಇವರಿಗೆ

ಮಾನ್ಯ ಆಯುಕ್ತರು
ಧಾರವಾಡ ಮಹಾನಗರಪಾಲಿಕೆ
ಧಾರವಾಡ

ಮಾನ್ಯರೇ,

ವಿಷಯ : ನಮ್ಮ ಸಾಧನಕೇರಿ ಬಡಾವಣೆಯಲ್ಲಿ 'ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಿಕೊಡುವಂತೆ ಕೋರಿ ಮನವಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾವು ವಾಸಿಸುವ ಸಾಧನ ಕೇರಿ ಬಡಾವಣೆಯಲ್ಲಿರುವ ಬೇಂದ್ರೆ ಅವರ ಮನೆಯನ್ನು ವೀಕ್ಷಿಸಲು ಪ್ರತಿನಿತ್ಯ ನೂರಾರು ಜನ ಪ್ರವಾಸಿಗರು ಆಗಮಿಸುತ್ತಾರೆ. ನಮ್ಮ ಬಡಾವಣೆಯಲ್ಲಿ ತಿರುಗಾಡುವ ವ್ಯಕ್ತಿಗಳು ರಸ್ತೆಬದಿಯಲ್ಲಿ ಶೌಚಕಾರ್ಯಗಳನ್ನು ಮಾಡುವುದರಿಂದ ರಸ್ತೆಯಲ್ಲಿ ಓಡಾಡುವ ಜನರಿಗೆ ಮುಜುಗರವಾಗುತ್ತದೆ. ಇದಕ್ಕೆಲ್ಲ ಕಾರಣ ನಮ್ಮ ಬಡಾವಣೆಯಲ್ಲಿ ಒಂದು ಸಾರ್ವಜನಿಕ ಶೌಚಾಲಯ ಇಲ್ಲದಿರುವುದು. ಆದ್ದರಿಂದ ತಾವು ಈ ಬಗ್ಗೆ ಗಮನಹರಿಸಿ, ನಮ್ಮ ಸಾಧನಕೇರಿ ಬಡಾವಣೆಯಲ್ಲಿ ಸುಸಜ್ಜಿತವಾದ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.
ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ

ತಮ್ಮ ನಂಬುಗೆ
ಸಹಿ/–
(ಹರ್ಷಿತಾ)

ಹೊರ ವಿಳಾಸ

| ಇಂದ | ಇವರಿಗೆ |
|---|---|
| ಹರ್ಷಿತಾ<br>10 ನೆಯ ತರಗತಿ<br>ಸಾಧನಕೇರಿ ಬಡಾವಣೆ<br>ಧಾರವಾಡ | ಮಾನ್ಯ ಆಯುಕ್ತರು<br>ಧಾರವಾಡ ಮಹಾನಗರಪಾಲಿಕೆ<br>ಧಾರವಾಡ |

**ಅಥವಾ**

| | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **2 ಅಂಕಗಳು** |
| **ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **5 ಅಂಕಗಳು** |

**ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ 'ಅಥರ್ವ' ಎಂದು ಭಾವಿಸಿಕೊಂಡು, 'ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ' ಕಾರ್ಯಕ್ರಮವನ್ನು ವಿವರಿಸಿ, ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಸಿದ್ಧಾಂತ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.**

ಕ್ಷೇಮ ಶ್ರೀ

ದಿನಾಂಕ : 25–03–2024
ಅಥರ್ವ
10 ನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ದಾವಣಗೆರೆ

ಪ್ರೀತಿಯ ಗೆಳೆಯನಾದ ಸಿದ್ಧಾಂತನಿಗೆ ನಿನ್ನ ಪ್ರೀತಿಯ ಗೆಳೆಯನು ಮಾಡುವ ವಂದನೆಗಳು.

ಇಲ್ಲಿ ನಾವೆಲ್ಲರೂ ಕ್ಷೇಮವಾಗಿದ್ದೇವೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿರಿವಿರೆಂದು ನಂಬಿರುತ್ತೇನೆ.

ದಿನಾಂಕ : 20–01–2024 ರಂದು ನಮ್ಮ ಶಾಲೆಯಲ್ಲಿ 'ಶಾಲಾ ವಾರ್ಷಿಕೋತ್ಸವ ಸಮಾರಂಭ' ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಶಾಲೆಯ ಮುಖ್ಯೋಪಾಧ್ಯಾಯರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಮ್ಮೂರಿನವರೆ ಆದ ನಿವೃತ್ತ ಕ್ಯಾಪ್ಟನ್ ಮಹೇಶ್ ಅವರು ಆಗಮಿಸಿದ್ದರು. ಇವರು ನಮ್ಮ ಭಾರತೀಯ ಸೈನ್ಯದಲ್ಲಿ ಕ್ಯಾಪ್ಟನ್ ಆಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ತಾವು ಭಾಗವಹಿಸಿದ ಯುದ್ಧಗಳ ಬಗ್ಗೆ ರೋಚಕವಾದ ಸಂಗತಿಗಳನ್ನು ವಿದ್ಯಾರ್ಥಿಗಳೊಡನೆ ಹಂಚಿಕೊಂಡರು. ವಿದ್ಯಾರ್ಥಿಗಳು ದೇಶಭಕ್ತಿಯನ್ನು ಬೆಲೆಸಿಕೊಳ್ಳುವಂತೆ ಕರೆ ನೀಡಿದರು. ವಿದ್ಯಾರ್ಥಿಗಳು ಭಾರತೀಯ ಸೈನ್ಯಕ್ಕೆ ಸೇರುವಂತೆ ಪ್ರೋತ್ಸಾಹಿಸಿದರು. ಅವರ ಮಾತುಗಳನ್ನು ಕೇಳುತ್ತಿದ್ದರೆ ಮೈರೋಮಾಂಚನವಾಗುತ್ತಿತ್ತು. ನಂತರ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಣೆಯನ್ನು ಮಾಡಿದರು. ನಾನು ನಾಯಕನಾಗಿದ್ದ ನಮ್ಮ ಟೀಂ ಕ್ರಿಕೆಟ್ ಆಟದಲ್ಲಿ ಮೊದಲ ಸ್ಥಾನ ಪಡೆದುಕೊಂಡಿತ್ತು. ನಮ್ಮ ಗೆಳೆಯರೊಡನೆ ನಾನು ಸಹ ಕಪ್ ಪಡೆದುಕೊಂಡು ಸಂಭ್ರಮಿಸಿದೆನು. ಆನಂತರ ನಮ್ಮ ಶಾಲೆಯ ವಿದ್ಯಾರ್ಥಿಗಳಿಂದ ವಿವಿಧ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮ ಬಹುಸುಂದರವಾಗಿ ಮೂಡಿಬಂದಿತು.

ನೀನು ಈ ಕಾರ್ಯಕ್ರಮಕ್ಕೆ ಬರಬೇಕಿತ್ತು. ನೀನು ನನ್ನೊಡನೆ ಇದ್ದರೆ ಇನ್ನು ಸಂತೋಷವಾಗುತ್ತಿತ್ತು. ಮುಂದಿನ ಬಾರಿ ನೀನು ನಮ್ಮ ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎನ್ನುವುದು ನನ್ನ ಆಸೆ. ಯಾವುದಕ್ಕೂ ಈ ಪತ್ರವನ್ನು ಕಂಡಕೂಡಲೇ ಮರುಪತ್ರವನ್ನು ಬರೆಯುವುದು.

ವಂದನೆಗಳೊಡನೆ

ನಿನ್ನ ಪ್ರೀತಿಯ ಗೆಳೆಯ
ಸಹಿ/–
(ಅಥರ್ವ)

ಹೊರವಿಳಾಸ

| ಇಂದ | ಇವರಿಗೆ |
|---|---|
| ಅಥರ್ವ<br>10 ನೆಯ ತರಗತಿ<br>ಸರ್ಕಾರಿ ಪ್ರೌಢಶಾಲೆ<br>ದಾವಣಗೆರೆ | ಸಿದ್ಧಾಂತ್<br>10 ನೆಯ ತರಗತಿ<br>ಸರ್ಕಾರಿ ಪ್ರೌಢಶಾಲೆ<br>ಬೆಳಗಾವಿ |

****************

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

| | |
|---|---|
| ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ | 2 ಅಂಕಗಳು |
| ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| ಭಾಷಾ ಶೈಲಿ, ಪದಬಂಧ | 1 ಅಂಕ |
| ಒಟ್ಟು | 5 ಅಂಕಗಳು |

**45. ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯರ ಸಾಧನೆ**

**ಪೀಠಿಕೆ :** ಏಷ್ಯಾ ಕ್ರೀಡಾಕೂಟವು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಏಷ್ಯನ್ ರಾಷ್ಟ್ರಗಳ ನಡುವೆ ನಡೆಯುವ ಮಹತ್ತ್ವದ ಕ್ರೀಡಾಕೂಟವಾಗಿದೆ. ಕ್ರಿ. ಶ. 1951 ರಲ್ಲಿ ಮೊದಲ ಏಷ್ಯಾಡ್ ಕ್ರೀಡಾಕೂಟವು ನವದೆಹಲಿಯಲ್ಲಿ ನಡೆದಿತ್ತು. ಇದು ಭಾರತದ ಕ್ರೀಡಾ ಚರಿತ್ರೆಯಲ್ಲಿ ಪ್ರಮುಖ ಘಟನೆಯಾಗಿದೆ. ಈ ಕ್ರೀಡಾಕೂಟದಲ್ಲಿ ಭಾರತವು ಪ್ರತಿಸಾರಿ ಕ್ರೀಡಾಪಟುಗಳ ಅತ್ಯುತ್ತಮ ಸಾಧನೆಗಳ ಮೂಲಕ ಪ್ರಪಂಚದ ಗಮನ ಸೆಳೆಯುತ್ತದೆ.

**ವಿಷಯ ನಿರೂಪಣೆ :** ಪ್ರಾರಂಭಿಕ ಹಂತದಲ್ಲಿ ಭಾರತವು ಮುಖ್ಯವಾಗಿ ಅಥ್ಲೆಟಿಕ್ಸ್, ಕುಸ್ತಿ, ಶೂಟಿಂಗ್ ಮತ್ತು ಹಾಕಿ ಕ್ರೀಡಾ ವಿಭಾಗಗಳಲ್ಲಿ ಹೆಚ್ಚು ಪದಕಗಳನ್ನು ಗಳಿಸಿತು. ಭಾರತದ ಹುಸೇನ್ ಬೋಲ್ಟ್ ಎಂದು ಕರೆಯಲ್ಪಡುವ ಮಿಲ್ಖಾಸಿಂಗ್ 1962 ರಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಪಿ. ಟಿ. ಉಷಾ ಅವರು 1986 ರ ಏಷ್ಯನ್ ಕ್ರೀಡಾಕೂಟದಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಗೆದ್ದು, ಭಾರತದ ಹೆಮ್ಮೆಯ ಕ್ರೀಡಾತಾರೆ ಎನಿಸಿದರು.

ಕೊನೆಯ ಕೆಲವು ಕ್ರೀಡಾಕೂಟಗಳಲ್ಲಿ ಭಾರತದ ಕ್ರೀಡಾಪಟುಗಳು ಹೊಸ ಮೈಲಿಗಲ್ಲುಗಳನ್ನು ಸಾಧಿಸಿದ್ದಾರೆ. 2018 ರಲ್ಲಿ ನೀರಜ್ ಚೋಪ್ರಾ ಅವರು ಜಾವಲಿನ್ ಥ್ರೋದಲ್ಲಿ ಚಿನ್ನದ ಪದಕವನ್ನು ಗೆದ್ದು, ಭಾರತದ ಕ್ರೀಡಾ ಇತಿಹಾಸವನ್ನು ಹೊಸ ಮಟ್ಟಕ್ಕೆ ಕೊಂಡೊಯ್ದರು. ಬ್ಯಾಡ್ಮಿಂಟನ್‌ನಲ್ಲಿ ಪಿ. ವಿ. ಸಿಂಧು ಮತ್ತು ಸಾಯಿ ನೆಹ್ವಾಲ್ ಅವರು ತಮ್ಮ ಕ್ರೀಡಾ ಕೌಶಲ್ಯದಿಂದ ದೇಶದ ಕೀರ್ತಿಯನ್ನು ಹೆಚ್ಚಿಸಿದರು. ಇತ್ತೀಚಿನ ದಿನಗಳಲ್ಲಿ ಭಾರತದ ಮಹಿಳಾ ಕ್ರೀಡಾಪಟುಗಳ ಸಾಧನೆ ಗಮನಾರ್ಹವಾಗಿದೆ. ಮೇರಿ ಕೋಮ್ ಅವರು ಬಾಕ್ಸಿಂಗ್‌ನಲ್ಲಿ ತಮ್ಮ ಸಾಧನೆಯ ಮೂಲಕ ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಬಜರಂಗ್ ಪುನಿಯಾ ಮತ್ತು ವಿನೇಶ್ ಫೋಗಟ್ ಅವರು ಕುಸ್ತಿಯಲ್ಲಿ ಉತ್ತಮ ಸಾಧನೆಯನ್ನು ಮಾಡಿ ಭಾರತದ ಕ್ರೀಡಾ ಪರಂಪರೆಯನ್ನು ಮುಂದುವರಿಸಿದ್ದಾರೆ.

**ಉಪಸಂಹಾರ :** ತಾಂತ್ರಿಕ ಮತ್ತು ನಾಗರಿಕ ಮೂಲ ಸೌಕರ್ಯಗಳಲ್ಲಿ ಸುಧಾರಣೆ, ಕ್ರೀಡಾಪಟುಗಳಿಗೆ ಉತ್ತಮ ತರಬೇತಿ ಮತ್ತು ಪ್ರೋತ್ಸಾಹಕರ ಯೋಜನೆಗಳು ಭಾರತೀಯ ಕ್ರೀಡಾಕೂಟದ ಯಶಸ್ಸಿಗೆ ಕಾರಣವಾಗಿದೆ. ಭಾರತವು ಏಷ್ಯಾಕ್ರೀಡಾಕೂಟದಲ್ಲಿ ತನ್ನ ಸ್ಥಾನವನ್ನು ನಿರಂತರವಾಗಿ ಬಲಪಡಿಸುತ್ತಿದ್ದು, ಮುಂದಿನ ಆವೃತ್ತಿಗಳಲ್ಲಿ ಇನ್ನಷ್ಟು ಸಾಧನೆ ಮಾಡುವ ಭರವಸೆಯನ್ನು ನೀಡುತ್ತಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಅಥವಾ

**ಶಾಲಾ ಆವರಣ ಹಾಗೂ ಶೌಚಾಲಯ ಸ್ವಚ್ಛತೆ**

**ಪೀಠಿಕೆ :** ಶಾಲೆಯು ಮಕ್ಕಳ ವಿದ್ಯಾಭ್ಯಾಸದ ಪವಿತ್ರಸ್ಥಳವಾಗಿದ್ದು, ಅದರ ಆವರಣದ ಸ್ವಚ್ಛತೆ ಅತ್ಯಂತ ಪ್ರಮುಖವಾಗಿದೆ. ಶುದ್ಧವಾದ ಪರಿಸರವು ವಿದ್ಯಾರ್ಥಿಗಳ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಲು ಸಹಾಯಕವಾಗುತ್ತದೆ. ಶೌಚಾಲಯದ ಸ್ವಚ್ಛತೆಯು ಮೂಲಭೂತ ಅಗತ್ಯವಾಗಿದ್ದು, ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸುತ್ತದೆ.

**ವಿಷಯ ನಿರೂಪಣೆ :** ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಹ ಶುದ್ಧತೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ವಿದ್ಯಾರ್ಥಿಗಳು ಶಾಲಾವರಣದಲ್ಲಿ ಕಸಕಡ್ಡಿಗಳನ್ನು ಚೆಲ್ಲದೆ ನಿಗದಿತವಾದ ಸ್ಥಳದಲ್ಲಿರುವ ಕಸದ ಬುಟ್ಟಿಯಲ್ಲಿ ಹಾಕುವಂತೆ ತರಬೇತಿಯನ್ನು ಬಾಲ್ಯದಿಂದಲೇ ನೀಡಬೇಕು. ಪರಿಸರ ಮಾಲಿನ್ಯವನ್ನು ತಡೆಯಲು ಪ್ಲಾಸ್ಟಿಕ್ ಬಳಕೆಯನ್ನು ತಡೆಯಿಡಿಯಬೇಕು. ಶಾಲಾವರಣದಲ್ಲಿ ಮರಗಿಡಗಳನ್ನು ನೆಡುವುದರ ಮೂಲಕ ಹಸುರು ಕಂಗೊಳಿಸುವಂತೆ ಉಪವನವನ್ನು ನಿರ್ಮಾಣ ಮಾಡಬೇಕು. ಅಲ್ಲಲ್ಲಿ ಸೂಚನಾ ಫಲಕಗಳನ್ನು ಹಾಕುವುದರ ಮೂಲಕ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಪೋಷಕರ ಗಮನಸೆಳೆಯಬೇಕು. ಶೌಚಾಲಯವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ಅವಶ್ಯಕ. ಪ್ರತಿದಿನವೂ ಶೌಚಾಲಯವನ್ನು ಸ್ವಚ್ಛಗೊಳಿಸಬೇಕು. ನೀರು ಸರಿಯಾಗಿ ಹರಿದು ಹೋಗುವಂತೆ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಶೌಚಾಲಯದ ಬಳಿಯಲ್ಲಿ ಸೂಕ್ತವಾದ ರೀತಿಯಲ್ಲಿ ನೀರಿನ ವ್ಯವಸ್ಥೆ ಮಾಡಬೇಕು. ಶೌಚಾಲಯವನ್ನು ಬಳಸುವ ಮೊದಲು ಮತ್ತು ನಂತರ ನೀರನ್ನು ಹಾಕುವಂತೆ ತಿಳಿಸಬೇಕು. ಶೌಚಾಲಯದ ಬಳಕೆಯ ನಂತರ ಕೈತೊಳೆಯಲು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಆರೋಗ್ಯಕರ ಅಭ್ಯಾಸದ ಬಗ್ಗೆ ಸೂಕ್ತ ಮಾಹಿತಿಗಳನ್ನು ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಡಬೇಕು ಮತ್ತು

ತಾವು ಮಾದರಿಯಾಗಿ ಅವುಗಳನ್ನು ಅನುಸರಿಸಬೇಕು. ಶೌಚಾಲಯದಲ್ಲಿ ಆಹಾರದ ಪ್ಯಾಕೆಟ್‌ಗಳನ್ನು ಮತ್ತು ಸ್ಯಾನಿಟರಿ ನ್ಯಾಪಕಿನ್‌ಗಳನ್ನು ಹಾಕದಂತೆ ಸೂಚನೆ ನೀಡಬೇಕು. ಶಿಕ್ಷಕರು ಪ್ರತಿ ತಿಂಗಳು ಸ್ವಚ್ಛತೆಯ ಅಭಿಯಾನಗಳನ್ನು ನಡೆಯಿಸಿ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಶಾಲೆಯಲ್ಲಿ 'ವಿದ್ಯಾರ್ಥಿಗಳ ಹಸುರು ಸೇನೆ' ಸ್ಥಾಪನೆ ಮಾಡಬೇಕು. ಇವರು ಪ್ರತಿನಿತ್ಯ ಶಾಲಾ ಸ್ವಚ್ಛತೆಯನ್ನು ಕಾಪಾಡುವ ಜವಾಬ್ದಾರಿಯನ್ನು ನೀಡಬೇಕು. ವಿದ್ಯಾರ್ಥಿಗಳಲ್ಲಿ ಪರಿಸರ ಪ್ರೀತಿ ಮತ್ತು ಶುದ್ಧತೆಯ ಮಹತ್ತ್ವದ ಬಗ್ಗೆ ಅರಿವು ಮೂಡಿಸಬೇಕು. ಶಾಲಾವರಣ ಸ್ವಚ್ಛವಾಗಿಟ್ಟುಕೊಳ್ಳುವಲ್ಲಿ ಎಲ್ಲರ ಸಹಭಾಗಿತ್ವದ ಮಹತ್ತ್ವವನ್ನು ವಿವರಿಸಬೇಕು.

**ಉಪಸಂಹಾರ :** ಸ್ವಚ್ಛತೆಯು ಕೇವಲ ಆರೋಗ್ಯಕ್ಕಾಗಿ ಮಾತ್ರವಲ್ಲ. ಉತ್ತಮ ಜೀವನ ಶೈಲಿಯ ಸಂಕೇತವಾಗಿದೆ. ಶಾಲೆಯು ಜಾಗೃತ ಮತ್ತು ಶ್ರೇಷ್ಠ ಪಾಠಶಾಲೆಯಾಗಲು ಆವರಣ ಮತ್ತು ಶೌಚಾಲಯ ಸ್ವಚ್ಛತೆ ಕಾಪಾಡುವುದು ಅತ್ಯಗತ್ಯವಾಗಿದೆ. ಈ ಮೂಲಕ ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸಿಕೊಳ್ಳುವುದಕ್ಕೆ ಇದು ಸಹಾಯಕವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**************************************